DW1

ಅಸಲ ದಾವಾ ನಂ:228/2023

**<u>ಮೆ|| 1ನೇಯ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ</u>**

**<u>ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ</u>**

1) ಶ್ರೀಮತಿ ರೇಣುಕವ್ವಾ ಕೋಂ ಉದ್ದಪ್ಪಾ ಬಸಳಗುಂದಿ

...ವಾದಿ

ವಿರುದ್ಧ

1) ಶ್ರೀ.ಮಾರುತಿ ತಂದೆ ಲಕ್ಷ್ಮಣ ಪಟ್ಯಾಳ
ಹಾಗೂ ಇತರರು

...ಪ್ರತಿವಾದಿಯರು

NOTARY ★ GOVERNMENT OF INDIA ★ Sri D.P. GUDAJ Mudalagi & Gokak Taluk Dist.Belagavi-Karnataka Reg.No. 12473/2017 Exp. Date: 09/01/2027

**<u>ಮುಖ್ಯ ವಿಚಾರಣೆ ಡಿ.ಡಬ್ಲು.1 ಇವರದು ಪ್ರಮಾಣ ಪತ್ರದ ಮೂಲಕ</u>**

ಇದರಲ್ಲಿ ನಾನು ಶ್ರೀ.ಮಾರುತಿ ತಂದೆ ಲಕ್ಷ್ಮಣ ಪಟ್ಯಾಳ, ವಯಾ: 66 ವರ್ಷ, ಉದ್ಯೋಗ: ಶೇತ್ಕಿ, ಸಾ: ನಿಂಗಾಪೂರ ತಾ:ಗೋಕಾಕ ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಸಾಕ್ಷಿ ಪ್ರಮಾಣ ಪತ್ರ ಈ ಕೆಳಗಿನಂತಿದೆ.

1) ಸದರ ದಾವಾದಲ್ಲಿ ನಾನು ಪ್ರತಿವಾದಿ ಇರುತ್ತನೆ, ಸದರಿ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಆದ್ದರಿಂದ ಸದರಿ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಪರವಾಗಿ ಮಾಡಲು ಅರ್ಹನಿರುತ್ತೇನೆ.

R/copy for stm. A.K.K. [illegible]

2] ವಾದಿಯು ನನ್ನ ಹಾಗೂ ಇತರರ ಮೇಲೆ ಠರಾವಿಕ ಮತ್ತು ಖಾಯಂ ತರೀಖ ಮನಾಯಿ ಸಲುವಾಗಿ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಈ ದಾವೆಯನ್ನು ಮಾಡಿದ್ದು ಇರುತ್ತದೆ.

3] ಮೂಲಪುರುಷ ಸಿದ್ದಪ್ಪ ಕೆಂಚಪ್ಪ ಬಂತಿ ಇತನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರ ಪೈಕಿ ಕೆಂಚವ್ವ ಇವಳನ್ನು ನಾನು ಮದುವೆ ಮಾಡಿಕೊಂಡಿದ್ದು ಸದರಿ ನಮ್ಮ ವೈವಾಹಿಕ ಜೀವನದಿಂದ ಯಾವುದೆ ಸಂತಾನ ಪ್ರಾಪ್ತಿ ಆಗಿರುವುದಿಲ್ಲಾ. ಸದರಿ ನನ್ನ ಹೆಂಡತಿ ಕೆಂಚವ್ವ ಇವಳು ದಿನಾಂಖ 23/02/2011 ರಂದು ಮೃತವಾಗಿದ್ದು ಇರುತ್ತದೆ. ಸದರಿ ನನ್ನ ಹೆಂಡತಿಗೆ ದಾವಾ ಆಸ್ತಿಗಳಲ್ಲಿ ಅವಳ ತವರು ಮನೆಯಿಂದ 1/3 ಪಾಲಿಗೆ

ಅರ್ಹಳಾಗಿರುತ್ತಾಳೆ. ಸದರಿ ನನ್ನ ಹೆಂಡತಿ ಮೈತವಾದ ನಂತರ ನಾನು ಸಂಬಂದಪಟ್ಟ ಕಂದಾಯ ಇಲಾಖೆಯಿಂದ ವಾರಸಾ ಪ್ರಮಾಣ ಪತ್ರವನ್ನು ಪಡೆದುಕೊಂಡು ದಾವಾ ಆಸ್ತಿಗಳಿಗೆ ಎಮ್.ಆರ್.ನಂ.2/2011-12 ರ ಪ್ರಕಾರ ನನ್ನ ಹೆಸರು ಕ.ಡ.ಉತಾರದಲ್ಲಿ ದಾಖಲಾಗಿದ್ದು ಇರುತ್ತದೆ. ಸದರಿ ಹಕ್ಕು ದಾಖಲೆಯನ್ನು ವಾದಿಯು ಉಪವಿಭಾಗಾಧಿಕಾರಿಗಳು ಬೈಲಹೊಂಗಲ ಇವರಲ್ಲ ಆರ್.ಟಿ.ಎ.ಎಪಿ ನಂ;226/2011-12 ನೇದ್ದನ್ನು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯು ದಿ;27/01/2012 ರಂದು ವಜಾಗೊಳಿಸಿದ್ದು ಸದರಿ ಮೇಲ್ಮನವಿಯ ವಿರುದ್ಧ ವಾದಿಯು ಜಿಲ್ಲಾದಿಕಾರಿಗಳು ಬೆಳಗಾವಿ ಇವರಲ್ಲಿ ಆರ್.ಬಿ.ಆರ್.ಟಿ.ಎ. ಎಪಿ ನಂ.35/2013-14 ನೇದ್ದನ್ನು ಉಪವಿಬಾದಿಕಾರಿಗಳು ಬೈಲಹೊಂಗಲ ಇವರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು ಇರುತ್ತದೆ. ಸದರಿ ಮೇಲ್ಮನವಿಯು ಕೂಡ ಕೆಳ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದು ವಾದಿಯ ಮೇಲ್ಮನವಿಯನ್ನು ವಜಾಗೊಳಿಸಿದ್ದು ಇರುತ್ತದೆ. ನನ್ನ ಹೆಂಡತಿ ಮೈತವಾದ ನಂತರ ಅವಳ ಪಾಲಿಗೆ ಬರತಕ್ಕಂತ 1/3 ಜಮೀನದಲ್ಲಿ ಅವಳು ಮೈತವಾದ ನಂತರ ನಾನು ಉಪಭೋಗ ವಹಿವಾಟು ಮಾಡುತ್ತಾ ಕಬ್ಜೆಯಲ್ಲಿ ಇರುತ್ತೇನೆ. ಆದರೆ ವಾದಿಯು ಈ ದಾವೆಯ ದಾಖಲಾತಿಯನ್ನು ಮುಂದೆ ಇಟ್ಟುಕೊಂಡು ನನ್ನ ಕಬ್ಜಾವಹಿವಾಟಿಗೆ ಹರಕತ್ತ ಮಾಡಹತ್ತಿರುತ್ತಾಳೆ.

4] ವಾದಿಯು ತನ್ನ ವಾದ ಪತ್ರದಲ್ಲಿ ಬರೆದುಕೊಂಡ ಪ್ರಕಾರ ನನ್ನ ಹೆಂಡತಿ ಕೆಂಚವ್ವ ಇವಳು ತನ್ನ ಪಾಲಿನ 1/3 ಹಿಸ್ಸೆಯನ್ನು ವಾದಿಗೆ ಮತ್ತು ಅವಳ ತಾಯಿ ಕೆಂಚವ್ವ ಇವಳಿಗೆ ಹಕ್ಕು ಬಿಟ್ಟ ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾಳೆ ಅನ್ನುವ ವಿಷಯವು ಖೋಟ್ಟಿ ಮತಲಬಿಯಿಂದ ಕೂಡಿದ್ದು ಅದನ್ನು ವಾದಿ ಮತ್ತು ಅವಳ ತಾಯಿಯು ನನ್ನ ಮೈತ ಹೆಂಡತಿಗೆ ತಿಳಿಯಗೊಡದೆ ಸೃಷ್ಟಿಸಿಕೊಂಡಿರುತ್ತಾಳೆ. ಸದರಿ ಖೊಟ್ಟಿ ಪತ್ರದ ಪ್ರಕಾರ ನನ್ನ ಹೆಂಡತಿಯ ನನ್ನ ಪಾಲಿನ 1/3 ಹಿಸ್ಸೆಗೆ ಯಾವುದೇ ರೀತಿಯ ಬಂದನಕಾರಕ ಇರುವುದಿಲ್ಲ. ಆದ್ದರಿಂದ ವಾದಿಯ ವಾದ ಪತ್ರವನ್ನು ವಜಾಗೊಳಿಸಿಬೇಕು ಅಂತಾ ಮಾಡಿಕೊಂಡ ಸಾಕ್ಷಿ ಪ್ರಮಾಣ ಪತ್ರ.

ML ಬಿಟ್ಟಣ್ಣ

NOTARY GOVER... Sri D.P.G... Mudalagi... Dist.Bel... Reg...

No of Correction

ಈ ಸಾಕ್ಷಿ ಪ್ರಮಾಣ ಪತ್ರದೊಂದಿಗೆ ನಾನು ಕೆಲವೊಂದು ದಾಖಲೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಶಾನೆಗೊಳಿಸಲು ವಿನಂತಿ ಅದೆ.

ಸ್ಥಳ: ಗೋಕಾಕ
ದಿನಾಂಕ:02/09/2026

ಶಪಥವಿದಿಗಾರ

ಈ ಮೇಲೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಮಜಕೂರುಗಳು ನನ್ನ ಸ್ವಂತ ಮಾಹಿತಿ ಪ್ರಕಾರ ಹೇಳಿ ಬರೆಸಿದ್ದು, ಅವು ಸಂಪೂರ್ಣ ನಿಜವಿರುತ್ತವೆ.

ಸ್ಥಳ: ಗೋಕಾಕ
ದಿನಾಂಕ:02/09/2026

ಶಪಥವಿದಿಗಾರ

" ಸದರಿಯವರ ಪರಿಚಯವಿದೆ"

(ಆರ್.ಎಸ್.ಬೀರನ್ನವರ)
ಪ್ರತಿವಾದಿ ನಂ.1 ಪರ ವಕೀಲರು

NOTARY
Sri D.P. GUDAJ
Mudalagi & Gokak Taluk
Dist:Belagavi-Karnataka
Reg.No. 12473/2017
Exp. Date: 09/01/2027
GOVERNMENT OF INDIA

SWORN TO BEFORE ME
D. P. GUDAJ B.A.LL.B.(Spl)
ADVOCATE & NOTARY
GOVERNMENT OF INDIA
GOKAK TALUKA

02 SEP 2026

No of Correction